ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ
ಕ್ರಿಮಿನಲ್ ಕೇಸ್ ನಂ.30/2018
ಸಿ.ಡಬ್ಲೂಃ1 ಪಿ.ಡಬ್ಲೂಃ1

ಸಾಕ್ಷಿಗೆ ದಿನಾಂಕ 15/04/2024 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಸುಮಿತ್ರಾ |
| ತಂ/ಗಂ. ಹೆಸರು | ರಾಜು ದೊಡ್ಡಮನಿ |
| ವಯಸ್ಸು | 38 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ದೇವರ ಹಿಪ್ಪರಗಿ |

**ಮುಖ್ಯ ವಿಚಾರಣೆ ಃ ಶ್ರೀ ಎಪಿಪಿ ಯವರಿಂದ**

ಚಾ ಸಾ 4 ನನ್ನ ಗಂಡ. ಉಳಿದ ಸಾಕ್ಷಿದಾರರ ಪರಿಚಯ ಇದೆ. ಸುಮಾರು 6 ವರ್ಷಗಳ ಹಿಂದೆ ಸಾಲಕ್ಕಿ ಮೇಡಿಕಲ್ ಹತ್ತಿರ ನನ್ನ ಗಂಡ ಚಾ ಸಾ 4 ನಿಂತಿದ್ದ ಆಗ ಆರೋಪಿ ಮತ್ತು ಅಪ್ಪು ಎನ್ನುವವರು ಜಗಳ ಮಾಡುತ್ತಿದ್ದರು ಆಗ ನನ್ನ ಗಂಡ ಬಿಡಿಸಿಕೊಳ್ಳಲು ಹೋದಾಗ ಆರೋಪಿ ನೀನು ಏಕೆ ಬಿಡಿಸಿಕೊಳ್ಳಲು ಬರುತ್ತಿಯಾ ಬೋಸಡಿ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಬೀರ್ ಬಾಟಲಿಯಿಂದ ನನ್ನ ಗಂಡನ ತಲೆಗೆ, ಬಲಗಣ್ಣಿನ ಹುಬ್ಬಿನ ಹತ್ತಿರ ಹೊಡೆದು ಗಾಯಪಡಿಸಿರುತ್ತಾನೆ. ನಂತರ ಆ್ಯಂಬುಲೇನ್ಸ ಮೂಲಕ ಚಾ ಸಾ 5 ರಿಂದ 9 ರವರು ಸರ್ಕಾರಿ ಆಸ್ಪತ್ರೆ ವಿಜಯಪೂರಕ್ಕೆ ಆತನನ್ನು ಕರೆದುಕೊಂಡು ಹೋಗಿರುತ್ತಾರೆ. ಆತನನ್ನು ಆಸ್ಪತ್ರೆಯಿಂದ ಕರೆದುಕೊಂಡು ಬಂದು ಕಡಿಮೆ ಆಗದ ಕಾರಣ ಖಾಸಗಿ ಆಸ್ಪತ್ರೆಗೆ ತೋರಿಸಿರುತ್್ತೇನೆ. ನಂತರ ನಾನೇ ದೇವರ ಹಿಪ್ಪರಗಿ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇನೆ. ನಂತರ ನಾನು ಮರಳಿ ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 1 ಎಂದು, ಮತ್ತು ತನ್ನ ಹೆಬ್ಬೆಟ್ಟಿನ ಗುರುತು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಬೀಯರ ಬಾಟಲಿ ನೋಡಿ ಗುರುತಿಸಿದ್ದು ಅದನ್ನು ಈಗ ಮು ಮಾ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಎಸ್ ಬಿ ಡಿ ವಕೀಲರಿಂದ**

ನನ್ನ ಗಂಡ ಸಾರಾಯಿ ಕುಡಿಯುತ್ತಾನೆ ಎಂದರೆ ಯಾವಾಗಲಾದರು ಒಮ್ಮೆ

ಕುಡಿಯುತ್ತಾನೆ. ಆರೋಪಿ ಮತ್ತು ನಮಗೆ ಯಾವತ್ತು ಮನಸಾ ಮನಸಾ ಸರಿ ಇಲ್ಲ ಎಂದರೆ ಸರಿಯಲ್ಲ. ನನಗೆ ಬರೆಯಲು ಬರುವುದಿಲ್ಲ. ಆ ದಿನ ತಾರೀಖು 11, 6ನೇ ತಿಂಗಳು ಇತ್ತು. ದೂರನ್ನು ಭೀಮಾಶಂಕರ ಎಂಬುವವರು ಬರೆದಿರುತ್ತಾರೆ. ಆತ ನನ್ನ ಸಂಬಂಧಿ. ನಿಪಿ 1 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ನನ್ನ ಗಂಡ ಕುಡಿದು ಗಾಡಿ ಮೇಲಿಂದ ಬಿದ್ದು ಗಾಯಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಗಂಡನಿಗೆ ಹೊಡೆದಿರುವದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನಮ್ಮ ಮಧ್ಯ ವೈಯಕ್ತಿಕ ಮನಸ್ತಾಪ ಇರುವ ಕಾರಣ ಸುಳ್ಳು ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ದೂರು ನೀಡಿದ ನಂತರ ಪೋಲಿಸರು ನನ್ನ ವಿಚಾರಣೆ ಮಾಡಿಲ್ಲ. ಮು ಮಾ 1 ರಿಂದ ನನ್ನ ಗಂಡನಿಗೆ ಹೊಡಿ ಬಡಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ